(ಇಂದು ದಿನಾಂಕ: 03-07-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

ಮುಂದುವರೆದ **ಪಾಟೀಸವಾಲು: ಪ್ರತಿವಾದಿಯರ ಪರ ವಕೀಲರಿಂದ:**

1. ನನ್ನ ಗಂಡ ಬ್ರಹ್ಮಯ್ಯರವರಿಂದ ನಾನು ಜೀವನಾಂಶ ಕೋರಿ ಕ್ರಿಮಿ ನಂ. 1674/2016 ನೇದ್ದನ್ನು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ನನ್ನ ಸಾಕ್ಷಿ ಆಗಿದೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ನಾನು ಸಾಕ್ಷಿ ನುಡಿದು ಅದರಲ್ಲಿ ನಾನು ಚರ್ಚಿಗೆ ಹೋಗುತ್ತೇನೆ, ನನ್ನ ತಾಯಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿರುತ್ತಾರೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಸದರಿ ಅರ್ಜಿಯಲ್ಲಿ ನಾನು ಸಾಕ್ಷಿ ನುಡಿದು ಅದರಲ್ಲಿ ನಾನು ಚರ್ಚಿಗೆ ಹೋಗುತ್ತೇನೆ, ನನ್ನ ತಾಯಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿರುತ್ತಾರೆ ಎಂದು ಹೇಳಿದ್ದರೂ ಕೂಡಾ ನಾನು ಇಲ್ಲ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಾನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿದ್ದರೂ ಕೂಡಾ ಆಸ್ತಿ ಬರುವುದಿಲ್ಲ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮಕ್ಕಳನ್ನು ಕ್ರಿಶ್ಚಿಯನ್ ಧರ್ಮದ ಸಂಪ್ರದಾಯದಂತೆ ಬೆಳೆಸುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮಕ್ಕಳ ಜೊತೆ ಪ್ರತಿ ಭಾನುವಾರ ಚರ್ಚಿಗೆ ಹೋಗುತ್ತೇನೆ ಎಂದರೆ ಸರಿಯಲ್ಲ. ನಾನು ಈಗ 8 ವರ್ಷಗಳಿಂದ ನನ್ನ ಗಂಡನ ಜೊತೆ ಇಲ್ಲ ಎಂದರೆ ಸರಿ. ನನ್ನ ಗಂಡ ಮುಗ್ದ ಮನುಷ್ಯ ಎಂದರೆ ಸರಿಯಲ್ಲ. ಅವರು ಜಾಸ್ತಿ ಓದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಆಸ್ತಿ ಕಬಳಿಸಲು ಮೇಲೆ ಹೇಳಿದ ಪ್ರಕರಣದಲ್ಲಿ ನೈಜವಾಗಿ ಸಾಕ್ಷ್ಯ ನುಡಿದಿದ್ದರೂ ಕೂಡಾ ಇಲ್ಲ ಎಂದು ಇಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಾನು ನನ್ನ ಅತ್ತೆ ಮತ್ತು ನನ್ನ ಗಂಡನನ್ನು ಸರಿಯಾಗಿ ನೋಡಿಕೊಳ್ಳದೇ ಕಿರುಕುಳ ಕೊಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಅವರ ವಿರುದ್ದ ಸುಳ್ಳು ಕ್ರಿಮಿನಲ್ ಪ್ರಕರಣ, ಜೀವನಾಂಶ ಅರ್ಜಿ ಮತ್ತು ವಿಭಾಗ ಕೋರಿ ದಾವೆ ಸಲ್ಲಿಸಿ, ಅವರಿಂದ ಹೊರಗಡೆ ಬಂದಿದ್ದೇನೆ ಎಂದರೆ ಸರಿಯಲ್ಲ.

ನಾನು ಮಾನ್ಯ ಜಿಲ್ಲಾ ನ್ಯಾಯಾಲಯದಲ್ಲಿ ಕ್ರಿ.ಅ. 41/2018 ಸಲ್ಲಿಸಿದ್ದೇನೆ, ಅದು ವಜಾಗೊಂಡಿದೆ ಎಂದರೆ ಸರಿಯಲ್ಲ. ನ್ಯಾಯಾಲಯದ ಆದೇಶ ಪರಿಪಾಲನೆ ಮಾಡದೇ ನನ್ನ ಮಕ್ಕಳನ್ನು ಗಂಡನ ಜೊತೆ ಕಳುಹಿಸಿಲ್ಲ ಎಂದರೆ ಸರಿಯಲ್ಲ. ನಾನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿದ್ದ ಕಾರಣ ನನಗೆ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಐಟಮ್ ನಂ.1 ಮತ್ತು 2 ಪ್ರತಿವಾದಿ ನಂ.2 ರವರ ಸ್ತ್ರೀ ಧನ ಆಸ್ತಿ ಎಂದರೆ ಸರಿಯಲ್ಲ.

4. ನನ್ನ ಮಾವ ರಾಮು. ಅವರಿಗೆ ಕೇವಲ 2 ಎಕರೆ ಜಮೀನು ಇದೆ. ಉಳಿದ 2 ಎಕರೆ ಜಮೀನು ಅವರ ಮಗಳಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಗಂಡನನ್ನು ಹೊರತುಪಡಿಸಿ, ನನ್ನ ಅತ್ತೆ ಮತ್ತು ಮೂವರು ನಾದಿನಿಯರು ಇರುತ್ತಾರೆ ಎಂದರೆ ಸರಿ. ನನ್ನ ಗಂಡನ ಹೆಸರಲ್ಲಿ 2 ಎಕರೆ ಜಮೀನು ಒಂದು ಮನೆ ಇದೆ ಎಂದರೆ ಸರಿಯಲ್ಲ. ಬ್ರಹ್ಮಯ್ಯರವರಿಗೆ 30 ಗುಂಟೆ ಜಮೀನು ಮಾತ್ರ ಬರುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ಗಂಡನ ಮನೆ ಬಿಟ್ಟು ಬಂದ ನಂತರ 8 ವರ್ಷಗಳಿಂದ ಪುನಃ ಹೋಗಿರುವುದಿಲ್ಲ. ನಾನು ಹೋಗಿರುವುದಿಲ್ಲ, ಆದರೆ ಮಕ್ಕಳು ಹೋಗಿರುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು